S C.R.P.67

| Form No.4 (Criminal) Deposition Sheets (R.P.No.57) |
|---|

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ ೩೪/2025

**ಚಾ.ಸಾ.–11 ಪ್ರಾ.ಸಾ.–7**

| | |
|---|---|
| **ಸಾಕ್ಷಿದಾರರ ಹೆಸರು** | **ಪ್ರಸನ್ನ** |
| **ತಂದೆಯ ಹೆಸರು** | **ದೊಡ್ಡಯ್ಯ** |
| **ವಯಸ್ಸು** | **36 ವರ್ಷಗಳು** |
| **ಉದ್ಯೋಗ** | **ಚಾಲಕ ಕೆಲಸ** |
| **ವಾಸ** | **ಗೊರವನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 ರವರ ಪರಿಚಯ ಇದೆ. ಅವರು ನಮ್ಮ ಊರಿ ನವರು. ನಿಪಿ 6 ಮಹಜರಲ್ಲಿ ಇರುವ ಸಹಿ ನನ್ನದು. ಸಾಕ್ಷಿ ಒಪ್ಪಿದ್ದರಿಂದ ನಿಪಿ 6 ಬಿ ಎಂದು ಗುರುತಿಸಲಾಯಿತು. ಅದನ್ನು ಮದ್ದೂರು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. 8–10 ತಿಂಗಳ ಹಿಂದೆ ಮಾಡಿದ್ದೇನೆ. ಯಾವ ವಿಚಾರಕ್ಕೆ ಸಹಿ ಪಡೆದುಕೊಂಡರು ಗೊತ್ತಿಲ್ಲ. ನನ್ನ ಅಕ್ಕನ ಮಗ ಗಲಾಟೆ ಮಾಡಿಕೊಂಡಿದ್ದರು ಆದ್ದರಿಂದ ಪೊಲೀಸ್ ಠಾಣೆಗೆ ಹೋಗಿದ್ದೆ. ಯಾವ ವಿಚಾರಕ್ಕೆ ಸಂಬಂಧಿಸಿದಂತೆ ನಿಪಿ6 ಬರೆದಿದ್ದಾರೆ ಗೊತ್ತಿಲ್ಲ. ಪೊಲಿಸರಿಗೆ ಯಾರಾದರು ಏನಾದರು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ ಈಗ ನನಗೆ ತೋರಿಸುತ್ತಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದರ ಒಳಗೆ ಇರುವ ಬಟ್ಟೆ ಯಾರದು ಅಂತ ಗೊತ್ತಿಲ್ಲ. ನಾನು ಎರಡು ಮೂರು ಸಹಿಯನ್ನು ಪೊಲಿಸ್ ಠಾಣೆಯಲ್ಲಿ ಮಾಡಿದ್ದೇನೆ. ಈಗ ನನಗೆ ತೋರಿಸುತ್ತಿರುವ ಮತ್ತೊಂದು ಚೀಟಿಯಲ್ಲಿ ಇರುವ ಸಹಿ ನನ್ನದು. ಅದನ್ನು ಹಾಕಿರುವ

ಪೊಟ್ಟಣದಲ್ಲಿ ಇರುವ ಬನಿಯನ್ ಯಾರದು ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಮತ್ತೊಂದು ಪಟ್ಟಣದ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇದೆ. ಈಗ ತೋರಿಸುತ್ತಿರುವ ಜೀನ್ಸು ಪ್ಯಾಂಟು ಯಾರದು ಅಂತ ಗೊತ್ತಿಲ್ಲ ಯಾರು ಕೊಟ್ಟಿದ್ದಾರೆ ಗೊತ್ತಿಲ್ಲ. ನಿಪಿ 6 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ಚಾಸಾ 1 ನನಗೆ ಸಣ್ಣ ವಯಸ್ಸಿನಿಂದ ಪರಿಚಯಸ್ಥರು. ಪೊಲಿಸರು ನನ್ನನ್ನು ಮದ್ದೂರು ಪೊಲಿಸ್ ಠಾಣೆಗೆ ದಿಃ 22.3.2025 ರಂದು ಕರೆದಿದ್ದರು ಎಂದರೆ ಸರಿಯಲ್ಲ. ಪೊಲೀಸರು ಚಾಸಾ 1 ರವರು ಹಾಜರುಪಡಿಸಿದ ಬಟ್ಟೆಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಮಹಜರು ಸಾಕ್ಷಿಯಾಗಿ ಸಹಕರಿಸಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮೇಲೆ ಹೇಳಿದ ಎಲ್ಲ ರಕ್ತಕಲೆಗಳ ಬಟ್ಟೆಗಳನ್ನು ಪೊಲೀಸರು ಬಿಳಿಚೀಲಕ್ಕೆ ಹಾಕಿ ಅರಗಿನಿಂದ ಸೀಲು ಮಾಡಿದರು ಎಂದರೆ ಸರಿಯಲ್ಲ. ಸದರಿ ಬಟ್ಟೆಚೀಲದ ಮೇಲೆ ಚೀಟಿ ಅಂಟಿಸಿ ಅದರ ಮೇಲೆ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಮತ್ತು ಈ ಬಗ್ಗೆ ಮಹಜರನ್ನು 11.20 - 12.00 ವರೆಗೆ ಟೈಪುಮಾಡಿ ಪ್ರಿಂಟ್ ಔಟ್ ತೆಗೆದು ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ಅವುಗಳ ಅಂಶ ತಿಳಿದುಕೊಂಡು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು 10 ನೆ ತರಗತಿವರೆಗೆ ಓದಿದ್ದೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ದಾಖಲೆಯನ್ನು ಓದಿ ಸಹಿ ಮಾಡಲು ನನಗೆ ತೊಂದರೆ ಇರಲಿಲ್ಲ. ಪೊಲೀಸರು ನನ್ನನ್ನು ಹೆದರಿಸಿ ಸಹಿ ಪಡೆದುಕೊಂಡಿಲ್ಲ. ನಾನು ಪೊಲಿಸ್ ಠಾಣೆಯಲ್ಲಿ ನಾನು ಈಗ ತೋರಿಸಿದ ಬಟ್ಟೆಗಳನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ಆರೋಪಿತರು ಯಾವ ಊರಿನವರು ಗೊತ್ತಿಲ್ಲ. ಅವರನ್ನು ಪೊಲಿಸ್ ಠಾಣೆಯಲ್ಲಿ ನೋಡಿ ಗುರುತಿಸಿದ್ದೇನೆ. ಆರೋಪಿ ನಮ್ಮ ಊರಿನವನೆ ಆಗಿದ್ದರಿಂದ ಆತನವಿರುದ್ಧ

ಸಾಕ್ಷಿ ಕೊಟ್ಟರೆ ತೊಂದರೆ ಮಾಡುವ ಸಾಧ್ಯತೆ ಇರುತ್ತದೆ ಎಂದು ತಿಳಿದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

3) ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ